# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್
# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

6th Floor,
Kaveri Bhavan,
Bangalore-560009.


ಸಂಖ್ಯೆ: ಕೆಇಪಿಜಿಟಿ/ಕೆಸಿಒ123/ಪಿ19/2020-21/CYS-07 ದಿನಾಂಕ: 01 MAR 2021

ಲಗತ್ತು: ಅನುಬಂಧ-1

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ),
   ಬೆವಿಕಂ.
2. ಮುಖ್ಯ ಆರ್ಥಿಕ ಅಧಿಕಾರಿ,
   ಗುವಿಕಂ/ಹುವಿಕಂ/ಮವಿಕಂ/ಚಾವಿಸನಿ
3. ಆರ್ಥಿಕ ಸಲಹೆಗಾರರು(ಲೆ & ಸಂ),
   ಕವಿಪ್ರನಿನಿ.

ಮಾನ್ಯರೇ,

ವಿಷಯ: ಕೇಂದ್ರ ಸರ್ಕಾರದ ಜೀವನ ಪ್ರಮಾಣ ಪೋರ್ಟಲ್' ಮುಖಾಂತರ ಡಿಜಿಟಲ್ ಜೀವಿತ ಪ್ರಮಾಣ ಪತ್ರವನ್ನು ಸಲ್ಲಿಸುವ ಕುರಿತು.

ಉಲ್ಲೇಖ: 1. ನಿಗಮದ ಸುತ್ತೋಲೆ ಸಂಖ್ಯೆ ಕೆಇಪಿಜಿಟಿ/ಕೆಸಿಒ123/ಪಿ19/2014-15/ಸಿವೈಎಸ್-17 ದಿನಾಂಕ: 07.07.2014.

2. ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ. ಆಇ(ವಿಶೇಷ)184 ಪಿಇಎನ್ 2014 ದಿನಾಂಕ 13.07.2015.

************

ಕವಿಮಂ ಲೆಕ್ಕ ಕೈಪಿಡಿ ಸಂಪುಟ-IIB (Accounts Manual Volume IIB) ಅಧ್ಯಾಯ XI - ಪಿಂಚಣಿ ಪಾವತಿ ನಿಬಂಧನೆಗಳ ಪ್ರಕಾರ ಕುಟುಂಬ ಪಿಂಚಣಿದಾರರು ವರ್ಷಕ್ಕೆ 2 ಬಾರಿ ಅಂದರೆ **ಏಪ್ರಿಲ್ ಮತ್ತು ಅಕ್ಟೋಬರ್** ಮಾಹೆಗಳಲ್ಲಿ ಪಿಂಚಣಿದಾರರು ಜೀವಿತ ಹಾಗೂ ಕುಟುಂಬ ಪಿಂಚಣಿದಾರರು ಜೀವಿತ ಮತ್ತು ಮರು ಮದುವೆ ಆಗದಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರಗಳನ್ನು ಪಿಂಚಣಿ ಬಟವಾಡೆ ಲೆಕ್ಕಘಟಕಗಳ ಅಧಿಕಾರಿಗಳಿಗೆ ಸಲ್ಲಿಸಬೇಕಿರುತ್ತದೆ. ಈ ರೀತಿ ಏಪ್ರಿಲ್ ಮತ್ತು ಅಕ್ಟೋಬರ್ ಮಾಹೆಗಳಲ್ಲಿ ಪ್ರಮಾಣ ಪತ್ರಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಮೇ/ನವೆಂಬರ್ ಮಾಹೆಯಿಂದ ಪಿಂಚಣಿ/ಕುಟುಂಬ ಪಿಂಚಣಿಯನ್ನು ಸದರಿ ಪ್ರಮಾಣ ಪತ್ರಗಳನ್ನು ಸಲ್ಲಿಸುವವರೆಗೂ ಸ್ಥಗಿತಗೊಳಿಸಬೇಕಿರುತ್ತದೆ.

ಅದರಂತೆ, ಪ್ರಸ್ತುತ ಪಿಂಚಣಿ/ಕುಟುಂಬ ಪಿಂಚಣಿದಾರರು ತಮ್ಮ ಜೀವ/ಮರುಮದುವೆ ದೃಢೀಕರಣ ಪತ್ರವನ್ನು ಏಪ್ರಿಲ್ ಹಾಗೂ ಅಕ್ಟೋಬರ್ ಮಾಹೆಯಲ್ಲಿ ನಿಗದಿತ ನಮೂನೆಯಲ್ಲಿ ಸಲ್ಲಿಸುತ್ತಿದ್ದು, ಆರ್ಥಿಕ ವರ್ಷದಲ್ಲಿ ಒಮ್ಮೆ ಪಿಂಚಣಿ ಪಡೆಯುವ ಕಛೇರಿಗೆ ಭೇಟಿ ನೀಡಿ ರಿಜಿಸ್ಟರ್‌ನಲ್ಲಿ ಸಹಿ ಮಾಡುವ ಕ್ರಮವನ್ನು ಅನುಸರಿಸಲಾಗುತ್ತಿದೆ.

ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ (Ministry of Electronics and Information Technology) ಇಲಾಖೆಯು ಡಿಜಿಟಲ್ ಜೀವನ ಪ್ರಮಾಣ ಪತ್ರವನ್ನು ಪಡೆಯಲು 'ಜೀವನ್ ಪ್ರಮಾಣ್' ಎಂಬ ವೆಬ್‌ತಾಣವನ್ನು ಅಭಿವೃದ್ಧಿಪಡಿಸಿರುತ್ತದೆ. ಉಲ್ಲೇಖ-2ರ ಆದೇಶದಲ್ಲಿ ಕರ್ನಾಟಕ ಸರ್ಕಾರವೂ ಸಹ ಇದನ್ನು ಅಳವಡಿಸಿಕೊಂಡಿರುತ್ತದೆ. ಆದ್ದರಿಂದ, ಈ ವಿಧಾನವನ್ನು ಪಿಂಚಣಿದಾರರ ಅನುಕೂಲಕ್ಕಾಗಿ ಕವಿಪ್ರನಿನಿ/ವಿಸಕಂಗಳಲ್ಲಿಯೂ **ಹೆಚ್ಚುವರಿ ಆಯ್ಕೆಯಾಗಿ** ಅಳವಡಿಸಿಕೊಳ್ಳಲು ಪಿಂಚಣಿ ಬಟವಾಡೆ ಅಧಿಕಾರಿಗಳು ಪಿಂಚಣಿ/ಕುಟುಂಬ ಪಿಂಚಣಿದಾರರ ಆಧಾರ್ ಮತ್ತು ಮೊಬೈಲ್ ಸಂಖ್ಯೆಗಳನ್ನು ಪಡೆಯುವುದರ ಜೊತೆಗೆ ಈ ಕೆಳಕಂಡಂತೆ ಕ್ರಮವಹಿಸಬೇಕಿರುತ್ತದೆ. ಈಗಾಗಲೇ ಚಾಲ್ತಿಯಲ್ಲಿರುವ ಪಿಂಚಣಿ ಪಾವತಿ ನಿರ್ವಹಣೆ ವ್ಯವಸ್ಥೆ(PPMS) ತಂತ್ರಾಂಶದ ಡೇಟಾಬೇಸ್‌ನಲ್ಲಿ ಈ ಮಾಹಿತಿಗಳನ್ನು ಸಂಗ್ರಹಿಸಬಹುದಾಗಿದ್ದು, ಡಿಜಿಟಲ್ ಜೀವನ ಪ್ರಮಾಣ ಪತ್ರವನ್ನು online ಮುಖಾಂತರ ಪಡೆಯಲೂ ಸಹ ಈ ಮಾಹಿತಿಯನ್ನು ಉಪಯೋಗಿಸಬಹುದಾಗಿರುತ್ತದೆ.

1. ಪಿಂಚಣಿ/ಕುಟುಂಬ ಪಿಂಚಣಿದಾರರಿಂದ ಆಧಾರ್ ಕಾರ್ಡ್‌ನ ಪ್ರತಿ (Xerox Copy)ಯನ್ನು ಪಡೆಯುವುದು.

2. ಆಧಾರ್ ಸಂಖ್ಯೆಯನ್ನು ಜೀವಿತ ಪ್ರಮಾಣ ಪತ್ರವನ್ನು ಪಡೆಯಲು ಬಳಸಿಕೊಳ್ಳುವುದಕ್ಕಾಗಿ ಆಧಾರ್ ಪತ್ರಧಾರಕರ ಒಪ್ಪಿಗೆ ಪತ್ರವನ್ನು ಈ ಸುತ್ತೋಲೆಗೆ ಲಗತ್ತಿಸಿದ ನಮೂನೆಯಲ್ಲಿ ಪಡೆಯುವುದು. (ಅನುಬಂಧ-1)
3. 'ಆಧಾರ್'ಗೆ link ಆಗಿರುವ ಮೊಬೈಲ್ ಸಂಖ್ಯೆಯನ್ನು ಪಿಂಚಣಿದಾರರಿಂದ ಕಡ್ಡಾಯವಾಗಿ ಪಡೆಯುವುದು.

ಜೀವಿತ ಪ್ರಮಾಣ ಪೋರ್ಟಲ್‌ನ್ನು ಪಿಂಚಣಿದಾರರು ಬಳಸುವಾಗ ಈ ಮೊಬೈಲ್ ಸಂಖ್ಯೆಗೆ 'OTP' ಬರುವುದರಿಂದ ಯಾವ ಮೊಬೈಲ್ ಸಂಖ್ಯೆಗೆ ಆಧಾರ್ ಸಂಖ್ಯೆ link ಆಗಿರುತ್ತದೆಯೋ ಆ ನಂಬರ್ ಪಡೆಯಬೇಕಾಗಿರುತ್ತದೆ. ಈ ಆಧಾರ್ ಸಂಖ್ಯೆಯನ್ನು ಪ್ರಸ್ತುತ ಚಾಲ್ತಿಯಲ್ಲಿರುವ PPMS ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸಬೇಕಿರುತ್ತದೆ.

ಮೇಲಿನಂತೆ, ಡಿಜಿಟಲ್ ಜೀವನ ಪ್ರಮಾಣ ಪತ್ರ ಪಡೆಯುವ ಆಯ್ಕೆ ವಿಧಾನದಲ್ಲಿ ಆಸಕ್ತಿ ಇರುವ ಪಿಂಚಣಿ/ಕುಟುಂಬ ಪಿಂಚಣಿದಾರರಿಂದ ಮೇಲಿನ ಮಾಹಿತಿಗಳನ್ನು ಪಡೆದು PPMS ತಂತ್ರಾಂಶದಲ್ಲಿ ದಾಖಲಿಸುವ ಜೊತೆಗೆ ಸೂಕ್ತ ಮಾಹಿತಿಗಳನ್ನು ಒಳಗೊಂಡ ಪ್ರತ್ಯೇಕ ರಿಜಿಸ್ಟರನ್ನು ಸಹ ನಿರ್ವಹಿಸಬೇಕಾಗಿರುತ್ತದೆ.

ಡಿಜಿಟಲ್ ಜೀವನ ಪ್ರಮಾಣ ಪತ್ರ ಪಡೆಯುವ ಆಯ್ಕೆಯನ್ನು ಅನುಷ್ಠಾನಗೊಳಿಸಲು 80%ಗಿಂತ ಮೀರಿ ಪಿಂಚಣಿ/ಕುಟುಂಬ ಪಿಂಚಣಿದಾರರ ಭಾಗವಹಿಸುವಿಕೆಯು ಅವಶ್ಯಕವಿರುವುದರಿಂದ, ಈ ಮೇಲಿನ ಅಂಶವನ್ನು ಕಛೇರಿಯ ಸೂಚನಾ ಫಲಕದಲ್ಲಿ ಸೂಚನಾ ಪತ್ರವನ್ನು ಪ್ರಕಟಿಸಲು ಕ್ರಮ ಕೈಗೊಳ್ಳುವುದು. ಅಲ್ಲದೆ. ಇ-ಮೇಲ್/ಮೊಬೈಲ್‌ಗಳಿಗೆ ಗುಂಪು ಸಂದೇಶಗಳನ್ನು (Group Message) ಕಳುಹಿಸಲು ವ್ಯವಸ್ಥೆ ಮಾಡಿ ಪಿಂಚಣಿದಾರರು/ಕುಟುಂಬ ಪಿಂಚಣಿದಾರರ ಗಮನಕ್ಕೆ ತರುವುದು.

'ಜೀವನ ಪ್ರಮಾಣ ಪೋರ್ಟಲ್' ಮುಖಾಂತರ ಡಿಜಿಟಲ್ ಜೀವಿತ ಪ್ರಮಾಣ ಪತ್ರವನ್ನು ಪಡೆಯುವ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಸಮಯದಲ್ಲಿ ಪಿಂಚಣಿ ಬಟವಾಡೆ ಲೆಕ್ಕಘಟಕಗಳ ಸಿಬ್ಬಂದಿಗಳಿಗೆ ಹಾಗೂ ಪಿಂಚಣಿ/ಕುಟುಂಬ ಪಿಂಚಣಿದಾರರಿಗೆ ಅನುಕೂಲವಾಗಲು ಬಳಕೆದಾರರ ಕೈಪಿಡಿ (user manual)ಯನ್ನು ಒದಗಿಸಲು ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು.

ಈ ವಿಷಯದಲ್ಲಿ ಜರೂರಾಗಿ ಕ್ರಮವಹಿಸಬೇಕಾಗಿರುವುದರಿಂದ, ಮೇಲಿನಂತೆ ಆದ್ಯತೆ ಮೇರೆಗೆ ಕ್ರಮ ವಹಿಸುವಂತೆ ತಮ್ಮ ವ್ಯಾಪ್ತಿಯ ಪಿಂಚಣಿ ಬಟವಾಡೆ ಲೆಕ್ಕಘಟಕಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಹಾಗೂ ಸಂಬಂಧಪಟ್ಟ ವೃತ್ತದ ಉಪಲೆಕ್ಕ ನಿಯಂತ್ರಣಾಧಿಕಾರಿಗಳು ಮತ್ತು ವಲಯದ ನಿಯಂತ್ರಣಾಧಿಕಾರಿಗಳು ಮೇಲ್ವಿಚಾರಣೆ ಮಾಡಲು ಸೂಚಿಸಲು ಹಾಗೂ **ಅನುಸರಣಾ ವರದಿಯನ್ನು ಅಗತ್ಯ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಲು ಕೋರಿದೆ.**

ತಮ್ಮ ವಿಶ್ವಾಸಿ,

ಆರ್ಥಿಕ ಸಲಹೆಗಾರರು & ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ/ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್,

ಪ್ರತಿ:
ನಿರ್ದೇಶಕರು(ಆ & ಮಾಸಂ), ಕವಿಪ್ರನಿನಿ, ಕಾವೇರಿ ಭವನರವರ ಹಿರಿಯ ಆಪ್ತಕಾರ್ಯದರ್ಶಿ.
ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಎಲ್ಲಾ ಕವಿಪ್ರನಿನಿ/ಎಸ್ಕಾಂ
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ, ಎಲ್ಲ ಕವಿಪ್ರನಿನಿ/ಎಸ್ಕಾಂ
3. ಎಲ್ಲಾ ಲೆಕ್ಕಾಧಿಕಾರಿಗಳು/ಲೆಕ್ಕಾಧಿಕಾರಿ(ಆಂ.ಪ), ಕಾರ್ಯ ಮತ್ತು ಪಾಲನಾ ವಿಭಾಗ, ಎಲ್ಲ ವಿಸಕಂಗಳು.
4. ಲೆಕ್ಕಾಧಿಕಾರಿ, MRS ಶಿವಮೊಗ್ಗ, ಕವಿಪ್ರನಿನಿ.
5. ಲೆಕ್ಕಾಧಿಕಾರಿ(ಪಿಂಚಣಿ)/(ಪಿಂಚಣಿ ಕೋಶ), ಕವಿಪ್ರನಿನಿ/ವಿಸಕಂಗಳು

ಮು.ಕ

ಅನುಬಂಧ-1

To

The Pension Disbursing Authority

Division:

Place:

**AADHAAR SEEDING CONSENT FORM**

Name : ____________________________

I wish to seed my Adhaar number for Digital Life Certificate (DLC-Jeevan Praman)

| | | | | | | | | | | | | | |
|---|---|---|---|---|---|---|---|---|---|---|---|---|---|
| Pension ID as per PPMS | | | | | | | | | | | | | Pensioner/Family Pensioner |
| RPAR No | | | | | | | | | | | | | Male/Female |
| PPO No | | | | | | | | | | | | | SB A/c No |
| Aadhaar Number: | | | | | | | | | | | | | Bank: |
| Mobile Number: | | | | | | | | | | | | | Branch: |

**Consent for Aadhaar Authentication**

I, the holder of Aadhaar number hereby give my consent to KPTCL/ESCOMs/KPTCL and ESCOMs Pension and Gratuity Trust to obtain my Aadhaar number, Name and Fingerprint/Iris for authentication with UIDAI. It has been informed me that my identity information would only be used for the seeding within the department and for obtaining Digital Life Certificate(DLC) purpose only. I have been given to understand that my information submitted herewith shall not be used for any other purpose other than mentioned above.

Date:

Place:

Signature/Thumb Impression* of the Pensioner/Family Pensioner (*LTI in case of male and RTI in case of Female) →